

ಬೆಳಿಗ್ಗೆ ಎಟಿಎಂ ಕಾರ್ಡ್ ತೆಗೆದುಕೊಂಡು ಹೋಗಿ, ಎಲ್ಲ ದುಡ್ಡು ಬಿಡಿಸಿಕೊಂಡು ಬಂದು ಬಿಡಿ, ಯಾಕ್ ಸುಮ್ನೆ ತಲೆನೋವು' ಎಂದಳು ಹೆಂಡತಿ.

ಮರುದಿನ ಬೆಳಿಗ್ಗೆಯೇ ಎಟಿಎಂಗೆ ಹೋದೆ. ಮೊದಲು '10 ಸಾವಿರ' ನಗದು ಬೇಕೆಂದು ನಮೂದಿಸಿದೆ. **'Insufficient Fund'** ಎಂದು ಬಂತು! ಆ ಮೆಸೇಜ್ ನೋಡುತ್ತಲೇ ಬಾಯಿ ಒಣಗಿ, ತುಟಿಗಳು ಬಿರಿದು ಹೋದವು. ಬ್ಯಾಲೆನ್ಸ್ ಚೆಕ್ ಮಾಡಿದರೆ, ಇದ್ದದ್ದು ಕೇವಲ ₹507!

ಮತ್ತೆ ಮಿನಿ ಸ್ಟೇಟ್‌ಮೆಂಟ್ ತೆಗೆದೆ. ₹507ರ ಮಾಹಿತಿ ಬಿಟ್ಟರೆ ಉಳಿದ ಯಾವ ವಿವರವೂ ಇರಲಿಲ್ಲ. ಪೋಸ್ಟ್ ಆಫೀಸ್ ಎಟಿಎಂ ಬದಲು, ಎರಡು ಮೂರು ಬೇರೆ ಬ್ಯಾಂಕ್ ಎಟಿಎಂಗಳಿಗೂ ಓಡಿದೆ. ಅಲ್ಲಿಯೂ ಅದೇ ಫಲಿತಾಂಶ! ಅಂದು ಭಾನುವಾರ ಆಗಿದ್ದರಿಂದ ಪೋಸ್ಟ್ ಆಫೀಸ್‌ಗೂ ರಜೆ ಇತ್ತು. ಇನ್ನು ಹೆಂಡತಿಯಿಂದ 'ಮಂಗಳಾರತಿ' ತಪ್ಪದು ಎಂದುಕೊಂಡು ಸಂಜೆವರೆಗೂ ಸ್ನೇಹಿತರ ಜೊತೆಯೇ ಕಾಲ ಕಳೆದು ರಾತ್ರಿ ಮನೆಗೆ ಹೋದೆ !

'ಏನ್ ಸಮಾಚಾರ ಈಗ ಬರ್ತಿದೀರಿ, ನನ್ನ ದುಡ್ಡು ತಗೊಂಡು ಹೋಗಿ ಫ್ರೆಂಡ್ಸ್ ಜೊತೆಗೆ ಪಾರ್ಟಿ ಮಾಡಿ ಬಂದ್ರಾ ಹೇಗೆ' ಎಂದು ನಗುತ್ತಾ ಕೇಳಿದಳು ಹೆಂಡತಿ. ಆದರೆ, ನಾನು ನಗುವ ಸ್ಥಿತಿಯಲ್ಲಿರಲಿಲ್ಲ!

'ನಿನ್ನ ಅಕೌಂಟ್‌ನಲ್ಲಿ ಕೇವಲ 500 ರೂಪಾಯಿ ಇದೆ ಕಣೆ' ಅಂದೆ. ಮೇಲಿನಿಂದ ಕೆಳಗಿನವರೆಗೆ ನನ್ನ ನೋಡಿದ ಹೆಂಡತಿ, 'ನಾನು ಬಡಕೊಂಡೆ ಏನಾದರೂ ಎಡವಟ್ಟು ಮಾಡ್ತೀರಿ ಅಂತ, ಕೇಳಲಿಲ್ಲ ನನ್ನ ಮಾತು' ಎಂದವಳೇ, ಅವರ ಎಚ್‌ಎಂಗೆ ಫೋನ್ ಮಾಡಿದಳು. ಅವರು ಆಗಲೇ ಪರಿಚಯದ ಪೋಸ್ಟ್‌ಮನ್‌ಗೆ ಕರೆ ಮಾಡಿ, ಇರುವ ವಿಚಾರ ಹೇಳಿದರು.

ಮರುದಿನ, ಅಂದರೆ ಸೋಮವಾರ ಹೆಂಡತಿಯಿಂದ ಫೋನ್ ಬಂತು. 'ಪೋಸ್ಟ್‌ಮನ್ ಫೋನ್ ಮಾಡಿದ್ರು. ಅಕೌಂಟ್‌ನಲ್ಲಿ ಬ್ಯಾಲೆನ್ಸ್ ಸರಿಯಾಗಿದೆಯಂತೆ ರೀ... ಸ್ಯಾಲರಿ ಪೂರ್ತಿ ಇದೆ. ಅದೇನೋ **'IPPB'** ಆ್ಯಪ್ ಡೌನ್‌ಲೋಡ್ ಮಾಡಿಕೊಂಡರೆ, ಆನ್‌ಲೈನ್‌ನಲ್ಲಿಯೇ ಅಮೌಂಟ್ ಟ್ರಾನ್ಸ್‌ಫರ್ ಮಾಡಬಹುದಂತೆ' ಎಂದಳು.

'ಯಾವ ಆ್ಯಪೂ ಬೇಡ, ನಾಳೆ ಪೋಸ್ಟ್‌ಆಫೀಸ್‌ಗೆ ಇಬ್ಬರೂ ಹೋಗೋಣ' ಎಂದು ಫೋನ್ ಇಟ್ಟೆ.

ಕುತೂಹಲಕ್ಕೆ ಮತ್ತೆ ಎಟಿಎಂಗೆ ಹೋಗಿ ಬ್ಯಾಲೆನ್ಸ್ ಚೆಕ್ ಮಾಡಿದೆ. ಆಗಲೂ ತೋರಿಸಿದ್ದು ₹507 ಎಂದಷ್ಟೇ!

'ಇದೇನ್ರೀ ಸರ್, ನಿಮ್ಮ ಆಫೀಸ್ ಕಂಪ್ಯೂಟರ್‌ನಲ್ಲಿ ನೋಡಿದ್ರೆ ಕರೆಕ್ಟ್ ಬ್ಯಾಲೆನ್ಸ್ ತೋರಿಸುತ್ತೆ. ಎಟಿಎಂನಲ್ಲಿ ಚೆಕ್ ಮಾಡಿದ್ರೆ ಬರೀ 507 ರೂಪಾಯಿ ತೋರಿಸುತ್ತೆ' ಎಂದು ಪೋಸ್ಟ್‌ಮಾಸ್ಟರ್‌ಗೆ ಕೇಳಿದಳು ಹೆಂಡತಿ.

ಪೋಸ್ಟ್‌ಮಾಸ್ಟರ್ ಸಹಿತ, 3–4 ಸಿಬ್ಬಂದಿ ಬಂದು ಚೆಕ್ ಮಾಡಿದರೂ ಸಮಸ್ಯೆ ಎಲ್ಲಿಯದು ಎಂದು ಮೊದಲಿಗೆ ತಿಳಿಯಲೇ ಇಲ್ಲ. ಕೊನೆಗೆ, ಎಟಿಎಂ ಕಾರ್ಡ್ ತೆಗೆದುಕೊಂಡು, ಲಾಗ್ ಬುಕ್‌ನಲ್ಲಿ ಚೆಕ್ ಮಾಡಿದ ಪೋಸ್ಟ್‌ಮಾಸ್ಟರ್, 'ಮೇಡಂ, ಇದು ನಿಮ್ ಕಾರ್ಡ್ ಅಲ್ಲವೇ ಅಲ್ಲ' ಎಂದರು! 'ಸರ್, ನಮ್ಮ ಸ್ಕೂಲ್ ಸ್ಟಾಫ್ ಎಲ್ಲರದು ಸ್ಯಾಲರಿ ಅಕೌಂಟ್ ಮಾಡಿ, ನಿಮ್ಮ ಸಿಬ್ಬಂದಿಯೇ ಈ ಕಾರ್ಡ್ ತಂದುಕೊಟ್ಟಿದ್ದು' ಎಂದಳು ಹೆಂಡತಿ.

'ಮೇಡಂ, ಇದು ನಿಮ್ಮದೇ ಹೆಸರಿನ ಇನ್ನೊಬ್ಬರ ಕಾರ್ಡ್. ನಮ್ಮ ಸ್ಟಾಫ್ ಮಿಸ್ ಆಗಿ ನಿಮಗೆ ಅವರ ಕಾರ್ಡ್ ಕೊಟ್ಟಿದ್ದಾರೆ. ಅವರ ಅಕೌಂಟ್‌ನಲ್ಲಿ ಎಷ್ಟು ಬ್ಯಾಲೆನ್ಸ್ ಇದೆಯೋ ಅಷ್ಟೇ ತೋರಿಸುತ್ತಿದೆ. ನಿಮ್ಮ ಕಾರ್ಡ್ ಇನ್ನೂ ಬಂದೇ ಇಲ್ಲ' ಎಂದರು.

'ನಿಮ್ ತಪ್ಪಿನಿಂದ ನಮಗೆಲ್ಲ ಎಷ್ಟೊಂದು ಟೆನ್ಶನ್ ನೋಡಿ' ಎಂದು ನಾನು ಜೋರು ಮಾಡಿದೆ. 'ಆನ್‌ಲೈನ್ ಸಹವಾಸವೇ ಬೇಡ. ಇಲ್ಲೇ ಕ್ಯಾಶ್ ಎಲ್ಲ ತಗೊಳ್ತೀನಿ. ಚಲನ್ ಕೊಡಿ' ಎಂದು ಹೆಂಡತಿ ಕೇಳುತ್ತಿದ್ದಂತೆ, ಆ ಸಿಬ್ಬಂದಿ – 'ಕಾರ್ಡ್ ಇವರದಲ್ಲ ಎಂದಮೇಲೆ, ಅಕೌಂಟ್ ಕೂಡ ಇವರದೇ ಹೌದೋ ಅಲ್ಲವೋ' ಎಂದು ಮಾತನಾಡಿಕೊಂಡು, ನನ್ನನ್ನೂ, ನನ್ನ ಹೆಂಡತಿಯನ್ನೂ 'ಕಳ್ಳ'ರಂತೆ ನೋಡತೊಡಗಿದರು.

ಕೊನೆಗೆ, 'ನಿಮ್ಮ ಸಹಿ ಸಿಸ್ಟಮ್‌ಗೆ ಅಪ್‌ಲೋಡ್ ಆಗಿಲ್ಲ' ಎಂದು ನೆಪ ಹೇಳುತ್ತಾ, ನನ್ನ ಹೆಂಡತಿಯ ಸಹಿ ಸರಿಯಿದೆಯೋ, ಇಲ್ಲವೋ ಎಂಬುದನ್ನು ಮತ್ತೊಮ್ಮೆ ಚೆಕ್ ಮಾಡಿ ದುಡ್ಡು ಕೊಟ್ಟರು.

**'India post payments bank'** ಅಂದ್ರೆ **IPPB** ಆ್ಯಪ್ ಅನ್ನು ಪೋಸ್ಟ್ ಆಫೀಸ್ ಸಿಬ್ಬಂದಿ ನೆರವಿನಿಂದ ಮೊಬೈಲ್‌ಗೆ ಇನ್‌ಸ್ಟಾಲ್ ಮಾಡಿಸಿ, ಅಲ್ಲೇ ಆ್ಯಕ್ಟಿವೇಟ್ ಮಾಡಿಸಿಕೊಂಡು ಬರುತ್ತಾ ಹೆಂಡತಿಗೆ ಹೇಳಿದೆ, 'ನಿನ್ನ ಹೆಸರಿನ ಆ ಮಹಿಳೆ ತನ್ನ ಅಕೌಂಟ್‌ನಲ್ಲಿ ಲಕ್ಷಾಂತರ ರೂಪಾಯಿ ಇಟ್ಟುಕೊಂಡಿದ್ದರೆ ಎಲ್ಲ ಬಿಡಿಸಿಕೊಳ್ಳಬಹುದಿತ್ತಲ್ವ' ಎಂದೆ ಆಸೆಯಿಂದ. 'ಸಾಕ್ ಬನ್ರೀ, ಅಕಸ್ಮಾತ್ ನನ್ನ ಎಟಿಎಂ ಕಾರ್ಡ್ ಅವರ ಕೈಗೆ ಹೋಗಿದ್ದರೆ, ಇಷ್ಟೊತ್ತಿಗೆ ನನ್ನ ಅಕೌಂಟ್‌ನಲ್ಲಿ ಒಂದು ರೂಪಾಯಿಯೂ ಇರ್ತಿರಲಿಲ್ಲ ಅನ್ನೋದನ್ನೂ ಯೋಚನೆ ಮಾಡಿ' ಅಂದಳು.

ಪ್ರತಿಕ್ರಿಯಿಸಿ: **feedback@sudha.co.in**